DARKHAST LANDS GRANTED IN BANGALORE

562. Sri K. M. PUTTASWAMY (Chickballapur).—

Will the Minister for Revenue be pleased to state:—

(*a*) the extent of land granted under darkhast rules to various persons by the Government within radius of 10 miles from the Bangalore City during the year 1962-67 ;

(*b*) whether the grantees are cultivating the lands or alienated for construction of building premises ?

Sri H. V. KOUJALGI:— (Minister for Revenue)

(*a*)—	A.	Gts.
	2,869	32 3/4

(*b*) Some of the grantees are cultivating the lands and some have alienated them.

ಶ್ರೀ ಕೆ. ಎಂ. ಪುಟ್ಟಸ್ವಾಮಿ: ೧೯೬೨ ರಿಂದ ೧೯೬೭ರ ವರೆಗೆ ೨೮೬೯ ಎಕರೆ ೩೨ ಗುಂಟೆ ಜಮೀನನ್ನು ಹಂಚಿರುವುದರಲ್ಲಿ ಅಮಲ್ದಾರರು ಹಂಚಿದ್ದಾರೆಯೇ, ಡೆಪ್ಯುಟಿ ಕಮಿಷನರು ಹಂಚಿದ್ದಾರೆಯೇ, ಸರ್ಕಾರದವರು ಹಂಚಿದ್ದಾರೆಯೇ ಎನ್ನುವುದನ್ನು ತಿಳಿಸುವುದಕ್ಕಾಗುತ್ತದೆಯೇ? ಇದರಲ್ಲಿ ಬೆಂಗಳೂರು ಕಾರ್ಪೊರೇಷನ್‌ನಲ್ಲಿ ಇರುವ ರೆವಿನ್ಯೂ ಜಮೀನೆಷ್ಟು ಎಂದು ಹೇಳುವುದಕ್ಕಾಗುತ್ತದೆಯೇ?

‡ಶ್ರೀ ಎಚ್. ವಿ. ಕೌಜಲಗಿ: ಆ ಭೂಮಿಯನ್ನು ತಹಸೀಲ್ದಾರರು ಸ್ವಲ್ಪ ಹಂಚಿದ್ದಾರೆ, ಅಸಿಸ್ಟೆಂಟ್-ಕಮಿಷನರು ಸ್ವಲ್ಪ ಹಂಚಿದ್ದಾರೆ. ಸರ್ಕಾರದ ಮಟ್ಟದಲ್ಲಿ ಸ್ವಲ್ಪ ಹಂಚಿದ್ದಾರೆ. ಬೆಂಗಳೂರು ಕಾರ್ಪೊರೇಷನ್ ಪ್ರದೇಶದಲ್ಲಿ ಎಷ್ಟು ರೆವಿನ್ಯೂ ಜಮೀನಿದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಂ. ಪುಟ್ಟಸ್ವಾಮಿ: ಬೆಂಗಳೂರು ಕಾರ್ಪೋರೇಷನ್ ಪ್ರದೇಶದಲ್ಲಿ ಲಕ್ಷಾಂತರ ರೂಪಾಯಿ ಬೆಲೆ ಬಾಳತಕ್ಕ ರೆವಿನ್ಯೂ ಜಮೀನನ್ನು ಹಿಂದೆ ಇದ್ದ ಆದಕ್ಕೆ ಸಂಬಂಧಪಟ್ಟ ಮಂತ್ರಿಗಳು ಯಾವನು ಕೇಳಿ ಹಂಚಿದ್ದಾರೆ ಎನ್ನುವುದನ್ನು ಸ್ವಲ್ಪ ಹೇಳುತ್ತಾರೆಯೇ?

ಶ್ರೀ ಎಚ್. ವಿ. ಕೌಜಲಗಿ: ಭೂಮಿ ಹಂಚಿಕೆ ಬಗ್ಗೆ ಕಾಲಕಾಲಕ್ಕೆ ಬೇರೆ ಬೇರೆ ನಿಯಮಗಳಿದ್ದವು. ಆ ನಿಯಮಗಳ ಪ್ರಕಾರ ಹಂಚಿದ್ದಾರೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ: ದೇಶವನ್ನೇ ಮಾರಿ ಬಿಡಿ ಸ್ವಾಮಿ.

ಶ್ರೀ ಕೆ. ಎಚ್. ರಂಗನಾಥ್: ೨೮೬೯ ಎಕರೆಯಲ್ಲಿ ಕೆಲವೊಂದು ಸಾಗುವಳಿ ಮಾಡುತ್ತಿದ್ದಾರೆ, ಕೆಲವೊಂದು ಮಾರಾಟ ಮಾಡಿದ್ದಾರೆಂದು ಹೇಳಿದ್ದಾರೆ. ಎಷ್ಟು ಎಕರೆಯಲ್ಲಿ ಸಾಗುವಳಿ ಮಾಡುತ್ತಿದ್ದಾರೆ, ಎಷ್ಟು ಎಕರೆ ಮಾರಾಟ ಮಾಡಿದ್ದಾರೆ ಎಂದು ಹೇಳುವುದಕ್ಕಾಗುತ್ತದೆಯೇ?

‡ಶ್ರೀ ಎಚ್. ವಿ. ಕೌಜಲಗಿ: ೮೯ ಎಕರೆಗಳನ್ನು ೫೫ ಜನರು ಮಾತ್ರ ಮಾರಾಟ ಮಾಡಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್: ೧೫ ವರ್ಷದೊಳಗೆ ಪರಭಾರೆ ಮಾಡಬಾರದು ಎಂಬ ಕಂಡೀಷನ್ ಸರ್ಕಾರದವರು ಹಾಕಿರಲಿಲ್ಲವೇ? ಸರ್ಕಾರ ಆರೀತಿ ಕಂಡೀಷನ್ ಹಾಕಿದ್ದರೆ, ಮಾರಾಟ ಮಾಡಿರುವವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಚ್. ವಿ. ಕೌಜಲಗಿ: ಈ ವಿಚಾರದಲ್ಲಿ ಎನ್‌ಕ್ವೈರಿ ನಡೆಯುತ್ತಿದೆ, ಎನ್‌ಕ್ವೈರಿ ಇನ್ನೂ ಪೂರ್ಣವಾಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ: ೨೮೯೯ ಎಕರೆಯಲ್ಲಿ ಕೆಲವು ತಹಸೀಲ್ದಾರರು, ಕೆಲವು ಅಸಿಸ್ಟೆಂಟ್ ಕಮಿಷನರು, ಕೆಲವು ಸರ್ಕಾರದವರು ಹಂಚಿದ್ದಾರೆಂದು ಹೇಳಿದ್ದಾರೆ. ಸರ್ಕಾರದವರು ಎಷ್ಟು ವಿಲೇವಾರಿ ಮಾಡಿದ್ದಾರೆ, ತಹಸೀಲ್ದಾರರು ಎಷ್ಟು ವಿಲೇವಾರಿ ಮಾಡಿದ್ದಾರೆ, ಬಾಕಿ ಏಜೆನ್ಸಿ ಎಷ್ಟು ವಿಲೇವಾರಿ ಮಾಡಿದ್ದಾರೆ ಎಂಬುದನ್ನು ಹೇಳುತ್ತಾರೆಯೇ? ಕಾರ್ಪೊರೇಷನ್ ಪ್ರದೇಶದಲ್ಲಿ ಎಷ್ಟು ಭೂಮಿ ಇದೆ ಎನ್ನುವುದನ್ನು ಕಂಡುಕೊಳ್ಳುವುದಕ್ಕೆ ಏನು ಬಾಧಕವಿದೆ?

ಶ್ರೀ ಎಚ್. ವಿ. ಕೌಜಲಗಿ: ಈ ಪ್ರಶ್ನೆಗೆ ಸಾಕಷ್ಟು ನೋಟೀಸ್ ಕೊಟ್ಟರೆ ಹೇಳಬಹುದು.

1-30 P. M.

ಶ್ರೀ ಜಯಪ್ರಕಾಶ ನಾರಾಯಣ : ದೇವಾಲಯಕ್ಕೆ, ಸಂಬಂಧಪಟ್ಟ ಮುಜರಾಯೀ ಜಮೀನು ಕೊಟ್ಟಿದ್ದಾರಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ : ೧೯೬೯ ರ ನಂತರ ಯಾವುದೂ ಕೊಟ್ಟಿಲ್ಲ.

ಶ್ರೀ ಬಿ. ದೊಡ್ಡಬೋರೇಗೌಡ : ಜಮೀನು ಕೊಟ್ಟಿರುವುದರಲ್ಲಿ ಹೊರಗಡೆಯವರಿಗೆ ಕೊಟ್ಟಿದ್ದರೆ ಅವರ ಸಂಖ್ಯೆ ಎಷ್ಟು ? ಈ ಮನೆಯ ಯಾವ ಯಾವ ಸದಸ್ಯರಿಗೆ ಕೊಟ್ಟಿದ್ದೀರಿ ? ಇದರಲ್ಲಿ ಮಾರಿಕೊಂಡ ಜಮೀನು ಎಷ್ಟು ? ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಎಚ್. ವಿ. ಕೌಜಲಗಿ : ಎಷ್ಟು ಜನ ಎಂಬ ಸಂಖ್ಯೆ ಇಲ್ಲ. ಇದರಲ್ಲಿ ಒಂದು ಎಕರೆಯಿಂದ ನಾಲ್ಕು ಎಕರೆ ವರೆಗೆ ಜಮೀನು ಇದೆ. ಎಲ್ಲರೂ ಈ ರಾಜ್ಯದವರೇ ಇದ್ದಾರೆ. ಹೊರಗಿನವರು ಯಾರೂ ಇಲ್ಲ. ವಿವರದ ಬಗ್ಗೆ ಪ್ರತೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು.

ಶ್ರೀ ಕೆ. ಎಂ. ಪುಟ್ಟಸ್ವಾಮಿ : ಒಂದೊಂದು ಸೈಟು ೨೦ ಸಾವಿರ ೩೦ ಸಾವಿರ, ೪೦ ಸಾವಿರ ಬೆಲೆ ಬಾಳುವ ರೇವನ್ಯೂ ಲ್ಯಾಂಡ್ ಕೊಟ್ಟಿದ್ದೀರಿ. ಮಾರಾಟ ಮಾಡಿಕೊಂಡವರಿಂದ ಪುನಃ ಸ್ವಾಧೀನಪಡಿಸಿಕೊಳ್ಳಲು ಸರಕಾರ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಚ್. ವಿ. ಕೌಜಲಗಿ : ಇದರ ಬಗ್ಗೆ ಇನ್‌ಕ್ವಾಯರಿ ನಡೆದಿದೆ. ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

AVAILABILITY COPIES OF MYSORE PANCHAYAT ACT AND RULES

574. SRI B. M. IDINABBA (Mangalore):—

Will the Minister for Development be pleased to state:—

(*a*) whether there is not enough stock of copies of Mysore Panchayat Act Rules, 1959 ;